2)	ಹುಕ್ಕೇರಿ	4-00
3)	ಸೌಂದತ್ತಿ	6-07
	ಒಟ್ಟು	783-14

ಇಲ್ಲ.

ವಿಷಯ : – ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 389(547)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ)

ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಹಳ್ಳಿಖೇಡ್ ಆಡಳಿತ ಮಂಡಳಿಗೆ ಕಳೆದ ಎಷ್ಟು ವರ್ಷಗಳಿಂದ ಚುನಾವಣೆ ನಡೆಸಿರುವುದಿಲ್ಲ ;

ಆ) ಈ ರೀತಿ ಚುನಾವಣೆಯನ್ನು ನಡೆಸದೇ ಇರಲು ಕಾರಣವೇನು;

ಇ) ಈ ಮೇಲ್ಕಂಡ ಆಡಳಿತ ಮಂಡಳಿಗೆ ಯಾವಾಗ ಚುನಾವಣೆಗಳನ್ನು ನಡೆಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಮಂತ್ರಿಗಳು)

ಕಳೆದ 5 ವರ್ಷಗಳಿಂದ ಚುನಾವಣೆ ನಡೆದಿರುವುದಿಲ್ಲ.

ಬೀದರ್ ಜಿಲ್ಲಾಧಿಕಾರಿಗಳು ಹಾಗೂ ಕಾರ್ಖಾನೆಯ ವಿಶೇಷಾಧಿಕಾರಿಗಳು ಹಿಂದಿನ ಆಡಳಿತ ಮಂಡಳಿ ಎಸಗಿದ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಂಡಿರುತ್ತಾರೆ. ಅಲ್ಲದೆ ಕಾರ್ಖಾನೆಯು ಕೈಗತ್ತಿಕೊಂಡಿರುವ ಕಬ್ಬು ಅರೆಯುವ ಸಾಮರ್ಥ್ಯದ ವಿಸ್ತರಣಾ ಯೋಜನೆ ಪೂರ್ಣಗೊಳಿಸುವ ಉದ್ದೇಶದಿಂದ ಚುನಾವಣೆ ನಡೆಸಿರುವುದಿಲ್ಲ.

ಮೇಲ್ಕಂಡ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಅನ್ವಯ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : – ಮಂಡಿಸಲಾಯಿತು

ವರದಿಯನ್ನೊಪ್ಪಿಸುವುದು

ಶ್ರೀ ಡಿ.ಎ. ಚಿನ್ನಪ್ಪ(ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) : – ಮಾನ್ಯ ಅಧ್ಯಕ್ಷರೇ, ಸಣ್ಣ ಖನಿಜ ನಿಕ್ಷೇಪಗಳ ಬಗ್ಗೆ ನೀತಿಯೊಂದನ್ನು ಸೂಕ್ತವಾಗಿ ರೂಪಿಸುವುದಕ್ಕೆ ಸಂಬಂಧಿಸಿದಂತೆ ಕ್ರಮಗಳನ್ನು, ಸಲಹೆ ಮಾಡಲು ರಚಿಸಲಾಗಿದ್ದ ಉಭಯಸದನಗಳ ಸಮಿತಿ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : – ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ವಾಟಾಳ್‌ನಾಗರಾಜ್(ಚಾಮರಾಜನಗರ) : – ಮಾನ್ಯ ಅಧ್ಯಕ್ಷರೇ, ಇದು ಸರಿಯಲ್ಲ. ಸದನ ಸಮಿತಿಯನ್ನು ನೇಮಕ ಮಾದಿದಂಥ ಉದ್ದೇಶಕ್ಕೆ ಈ ಸಮಿತಿಯ ವರದಿಗೆ ಭಂಗವುಂಟಾಗಿದೆ. ಆದುದರಿಂದ, ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ. ಮಾನ್ಯ ಅಧ್ಯಕ್ಷರು ಯಾವುದನ್ನೂ ಇದಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳಬಾರದು. ನಾನು ಸಮಿತಿ ವರದಿ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಈಗ ಸದನದಲ್ಲಿ ಅವಿಶ್ವಾಸ ನಿರ್ಣಯದ ಗೊತ್ತುವಳಿ ಮೇಲೆ ಚರ್ಚೆ ನಡೆಯುತ್ತಿದೆ.

ಆದ್ದರಿಂದ, ಚರ್ಚೆ ಮುಕ್ತಾಯವಾಗಿ, ಪ್ರಶ್ನೋತ್ತರ ಅವಧಿ ಆದ ನಂತರ ತಾವು ಮುಂದಿನ ವಿಷಯ ಕೈಗೆತ್ತಿಕೊಳ್ಳಬೇಕು. ಆದರೆ, ಹಾಗೆ ಮಾಡದೇ ಇದ್ದಕ್ಕಿದ್ದಂತೆ ಕಾಗದ ಪತ್ರಗಳನ್ನು ಮಂಡಿಸಿ ಎಂದು ಹೇಳುವುದು, ಮಾನ್ಯ ಸಚಿವರು ಸಂದಿಯಲ್ಲಿ ಬಂದು ಈ ಒಂದು 'ಮೋಸದ ವರದಿ'ಯನ್ನು ಮಂಡಿಸುವುದಕ್ಕೆ ಅವಕಾಶ ಕೊಡಬಾರದು. ಆ ವರದಿ ಸರಿಯಿಲ್ಲ. ತಮಗೆ ಹೇಳುತ್ತೇನೆ: ರಾಜ್ಯದಲ್ಲಿ ಗ್ರಾನೈಟ್ ಲೂಟಿಯಾಗುತ್ತಿದೆ, ನಿಸರ್ಗ ಸಂಪತ್ತು ನಾಶವಾಗುತ್ತಿದೆ, ಈ ಸರ್ಕಾರಕ್ಕೆ ಒಂದು ನೀತಿಯಿಲ್ಲ, ಈ ಸರ್ಕಾರಕ್ಕೆ ಯೋಗ್ಯತೆಯೇ ಇಲ್ಲವೆಂದು ಇವೊತ್ತು ಹೇಳುತ್ತಿದ್ದೇನೆ. ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಸಮಿತಿಯ ಅಧ್ಯಕ್ಷರಾಗಿ ಮೋಸ ಮಾಡಿದ್ದಾರೆ.

ಅಧ್ಯಕ್ಷರು: ಈಗ ಮಾನ್ಯ ಸಚಿವರು ಸದನದಲ್ಲಿ ವರದಿಯನ್ನು ಒಪ್ಪಿಸಿದ್ದಾರೆ. ಸದನ ಇಲ್ಲದ ಸಮಯದಲ್ಲಿ ಅವರು ನನ್ನ ಹತ್ತಿರ ಬಂದು ವರದಿಯನ್ನು ಒಪ್ಪಿಸಿದ ನಂತರ ಈಗ ಸದನದಲ್ಲಿ ಮಂಡಿಸಲಾಗುತ್ತಿದೆಯೇ ಹೊರತು ಬೇರೇನೂ ಇಲ್ಲ; ಅವರು ವರದಿ ಕೊಟ್ಟಿದ್ದಾರೆ. ಆದರೆ, ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಕೆ.ಎಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :-ವರದಿಯನ್ನೊಪ್ಪಿಸುವುದೆಂದರೆ, ಅಧ್ಯಕ್ಷರಿಗೆ ಕೊಡುವುದು ಎಂದರ್ಥ.

ಶ್ರೀ ವಾಟಾಳ್‌ನಾಗರಾಜ್: ಅಧ್ಯಕ್ಷರಿಗೆ ವರದಿ ಒಪ್ಪಿಸುವುದು ಎಂದು ನನಗೂ ಅರ್ಥವಾಗಿದೆ. ಆದರೆ, ಅದೊಂದು ಮೋಸದ ವರದಿ; ಅದು ಒಂದು ಪಿತೂರಿಯ ವರದಿ, ಅದೊಂದು ಖಾಸಗಿ ಗ್ರಾನೈಟ್ ಮಾಲೀಕರ ಪರವಾಗಿರತಕ್ಕಂಥ ವರದಿ.

ಶ್ರೀ ಕೆ.ಎಚ್. ರಂಗನಾಥ್: ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರಿಗೆ ಕೋಪ ಬಂದಿರಬಹುದು. ಆದರೆ, ಆ ಸಮಿತಿಯಲ್ಲಿ ಉಭಯ ಸದನಗಳ ಸದಸ್ಯರಿರುತ್ತಾರೆ. ಆ ಸದಸ್ಯರುಗಳ ಸಲಹೆ, ಸೂಚನೆಗಳನ್ನು ತೆಗೆದುಕೊಂಡೇ ವರದಿ ತಯಾರಿಸಲಾಗಿದೆ. ಅದರ ಬಗ್ಗೆ ಯಾರೋ ಒಬ್ಬರು ಮಾತನಾಡಿದರೆ ಹೇಗಾಗುತ್ತದೆ? ಒಂದು ಪಕ್ಷ ಹೊರಗಡೆಯಿಂದ ಯಾರಾದರೊಬ್ಬರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದರೆ ಆ ಮಾತು ಬೇರೆ. ಇದು ಸದನದ ಸಮಿತಿಯಾಗಿದ್ದು, ಇದರ ವರದಿ ಬಗ್ಗೆ ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಿಲ್ಲದಿರುವಂಥ ಪರಿಸ್ಥಿತಿ ಇರಬಹುದು. ಆದರೆ, ಮಾತನಾಡುವಾಗ ನಾವು ಕೆಲವೊಂದು ರೀತಿಯ ಸೌಜನ್ಯ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಅದನ್ನು ಅನುಸರಿಸದೆ ಮಾತನಾಡಿದರೆ ತಪ್ಪಾಗುತ್ತದೆ.

ಶ್ರೀ ವಾಟಾಳ್‌ನಾಗರಾಜ್: ಇದೊಂದೇ ವರದಿಯಲ್ಲ, ಇನ್ನೂ ಅನೇಕ ವರದಿಗಳಿವೆ.

ಶ್ರೀ ಎಚ್. ವಿಶ್ವನಾಥಯ್ಯ: ಮಾನ್ಯ ಅಧ್ಯಕ್ಷರೇ, ಈ ವರದಿಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಆ ರೀತಿ ಕೇಳಬಹುದು.

ಶ್ರೀ ವಾಟಾಳ್‌ನಾಗರಾಜ್: ನಾನು ಮಾನ್ಯ ಸಚಿವರಾದ ಶ್ರೀ ರಂಗನಾಥ್‌ರವರ ಮಾತನ್ನು ಒಪ್ಪುತ್ತೇನೆ. ಆ ಕುರಿತು ನನ್ನ ಎರಡನೇ ಅಭಿಪ್ರಾಯವಿಲ್ಲ. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ; ನಾವು ವಿಭಿನ್ನವಾದಂಥ ವರದಿಗಳನ್ನು ಕೊಟ್ಟಿದ್ದೇವೆ. ಈಗ ಸದನದಲ್ಲಿ ತಮಗೆ ಒಪ್ಪಿಸಿರುವುದು ಒಂದೇ ವರದಿಯಾಗಿದೆ. ನಾನು ನನ್ನದೇ ಅದಂಥ ವರದಿ ಕೊಟ್ಟಿದ್ದೇನೆ. ರೈತ ಸಂಘದವರು ಅವರದೇ ಅದಂಥ ವರದಿ ಕೊಟ್ಟಿದ್ದಾರೆ; ಹಾಗೆಯೇ ಭಾರತೀಯ ಜನತಾ ಪಕ್ಷದ

ಸದಸ್ಯರು ಹಾಗೂ ಜನತಾ ದಳದ ಸದಸ್ಯರು ಅವರದೇ ಆದಂಥ ವರದಿ ಕೊಟ್ಟಿದ್ದಾರೆ. ಈ ವರದಿಯು ಒಮ್ಮತವಾದಂಥ ವರದಿಯಾಗಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ತಾವು ಈ ಒಂದೇ ಒಂದು ವರದಿಯನ್ನಲ್ಲ; ಎಲ್ಲರೂ ಕೊಟ್ಟಿರುವ ವರದಿಯನ್ನೂ ಕೂಡ ಈ ಸಭೆಯ ಮುಂದೆ ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ :- ಇದರ ಬಗ್ಗೆ ಡಿಸೆಂಡಿಂಗ್ ನೋಟ್‌ಗಳನ್ನು ಸದಸ್ಯರುಗಳು ಕೊಟ್ಟಿದ್ದಾರೆ. ನಾನು ಮಾನ್ಯ ವಾಟಾಳ್‌ನಾಗರಾಜ್‌ರವರಲ್ಲಿ ಕೇಳಿಕೊಳ್ಳುವುದೇನೆಂದರೆ ತಮ್ಮ ಅಭಿಪ್ರಾಯವೇನಿದೆ, ಅದನ್ನು ನಾವುಗಳೆಲ್ಲಾ ಹಂಚಿಕೊಳ್ಳಲು ಸಾಧ್ಯವಿದೆ, ಆದ್ದರಿಂದ ದಯಮಾಡಿ ಡಿಸೆಂಡಿಂಗ್ ನೋಟ್ ಏನು ಕೊಟ್ಟಿದ್ದಾರೆ ಇದರ ಬಗ್ಗೆ ಚರ್ಚೆ ಮಾಡಲು ಇಲ್ಲಿ ಅವಕಾಶವನ್ನು ಮಾಡಿಕೊಟ್ಟರೆ ಎಲ್ಲರೂ ಸಹ ಮಾತನಾಡಲು ಅವಕಾಶವಾಗುತ್ತದೆ.

ಶ್ರೀ ವಾಟಾಳ್‌ನಾಗರಾಜ್ :- ಇದು ವಿಭಿನ್ನವಾದ ವರದಿಯಾಗಿರುವುದರಿಂದ ದಯಮಾಡಿ ಇದರ ಮೇಲೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ಆದ್ದರಿಂದ ಈ ಸದನವು ಮುಗಿಯುವುದರೊಳಗಾಗಿ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಡಬೇಕು. ಯಾವ ಉದ್ದೇಶಕ್ಕಾಗಿ ಇದರ ಬಗ್ಗೆ ಸದನದ ಸಮಿತಿಯನ್ನು ನೇಮಕ ಮಾಡಲಾಗಿತ್ತೋ, ಆ ಉದ್ದೇಶವು ಭಂಗವಾಗಿದೆಯೆಂಬುದು ನಮ್ಮ ಅಭಿಪ್ರಾಯ. ನಮ್ಮ ವರದಿಯನ್ನೂ ಸಹ ಕೊಟ್ಟಿದ್ದೇವೆ. ಆದ್ದರಿಂದ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ವರದಿಯ ಮೇಲೆ ಸಮಗ್ರವಾಗಿ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಇದೇ ಸಂದರ್ಭದಲ್ಲಿ ಅವಕಾಶವನ್ನು ಮಾಡಿಕೊಡಬೇಕು.

(ಗೊಂದಲ)

ಶ್ರೀ ಸಿ. ಬೈರೇಗೌಡ(ವೇಮಗಲ್) :-ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್‌ನಾಗರಾಜ್‌ರವರು ಈ ಸದನದ ಸಮಿತಿಯ ವರದಿಯನ್ನು ಮೋಸದ ವರದಿಯೆಂದು ಹೇಳಿದ್ದಾರೆ. ಇದರಲ್ಲಿ ನಾವೂ ಕೂಡ ಪ್ರತ್ಯೇಕವಾದಂಥ ವರದಿಯನ್ನು ಕೊಟ್ಟಿದ್ದೇವು. ಅವರು ನಾವು ಕೊಟ್ಟಿರುವ ವರದಿಯು ಮೋಸದ ವರದಿಯೆಂದು ಹೇಳುತ್ತಿದ್ದಾರೋ ಅಥವಾ ಈ ಎಲ್ಲಾ ವರದಿಯೂ ಸಹ ಅನಾಮತ್ತಾಗಿ ಮೋಸದ ವರದಿಯೆಂದು ಹೇಳುತ್ತಿದ್ದಾರೋ? ಏಕೆಂದರೆ ನಾವು ಆ ರೀತಿಯಾದಂಥ ಅಭಿಪ್ರಾಯವನ್ನಿಟ್ಟುಕೊಂಡು ವರದಿಯನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಈ ಸಮಿತಿಯ ಅಧ್ಯಕ್ಷರಾದ ಮಾನ್ಯ ಡಿ.ಎ. ಚಿನ್ನಪ್ಪನವರು ಕೊಟ್ಟಿರತಕ್ಕ ಈ ವರದಿಯು ಮೋಸದ ವರದಿಯಾಗಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

1. ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಪರವಾಗಿ : I beg to lay :-

1. Notification No. DPAR 24 SRD 93 dated 4.8.1993.

Amendment to the Karnataka Small Savings Services (Recruit-